<u>ದಿಃ **11.12.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಶ್ರೀ.ಪಿ.ಆರ್.ಎಂ ವಕೀಲರಿಂದಃ **4** ನೇ ಪ್ರತಿವಾದಿಯ ಪರವಾಗಿಃ</u>

**16)** ಸರ್ವೆ ನಂಬರಃ 310/1 ಬಿ/3 ಈ ಆಸ್ತಿಯು ನಮ್ಮ ಹಿರಿಯರ ಆಸ್ತಿಯಾಗಿರುತ್ತದೆ ಅಂದರೆ ಆ ಬಗ್ಗೆ ನನಗೆ ಮಾಹಿತಿ ಇರುವದಿಲ್ಲ. ಸದರಿ ಆಸ್ತಿಯು ನಮ್ಮ ಕುಟುಂಬದಲ್ಲಿ ಆದಂತಹ ಪಾಲು ವಿಭಾಗದ ಪ್ರಕಾರ ಪುನಃ ಸರ್ವೆ ನಂಬರ ಬದಲಾಗಿರುತ್ತದೆ ಅಂದರೆ ಆ ವಿಷಯ ನನಗೆ ಗೊತ್ತಿರುವದಿಲ್ಲ. ದಾವಾ ಆಸ್ತಿಗಳಲ್ಲಿ ಮಲ್ಲಾರೆಪ್ಪ ಮತ್ತು ಚೆನ್ನಬಸಪ್ಪ ಇಬ್ಬರ ಜೀವಿತ ಕಾಲದಲ್ಲಿ ಕುಟುಂಬದ ಆಸ್ತಿಗಳಲ್ಲಿ ಪಾಲು ವಾಟ್ನಿ 2005 ನೇ ಇಸ್ವಿಯಲ್ಲಿ ಮಾಡಿಕೊಂಡಿರುತ್ತಾರೆ ಅಂದರೆ ನನಗೆ ಗೊತ್ತಿರುವದಿಲ್ಲ. ಸದರಿ ಪಾಲು ವಾಟ್ನಿಯಲ್ಲಿ ರಿ.ಸ.ನಂಬರಃ 310/1 ಬಿ/3 ಈ ಆಸ್ತಿಯು ಮಲ್ಲಿಕಾರ್ಜುನ ತಂದೆ ಚೆನ್ನಬಸಪ್ಪ ಕುಳೇನೂರ ಇವರ ಹಿಸ್ಸೇಗೆ ಹೋಗಿತ್ತು ಅಂದರೆ ನನಗೆ ಗೊತ್ತಿರುವದಿಲ್ಲ. ಅದೇ ಆಸ್ತಿಯಲ್ಲಿ ಉಳಿಕೆಯ 26 ಗುಂಟೆ ಆಸ್ತಿಯು ನನ್ನ ಸಹೋದರನಾದ ಬಾಬು ಈತನ ಪಾಲಿಗೆ ಹೋಗಿತ್ತು ಅಂದರೆ ನನಗೆ ಗೊತ್ತಿರುವದಿಲ್ಲ.

**17)** ದಿನಾಂಕಃ 19.03.2005 ನೇ ಇಸ್ವಿಯಲ್ಲಿ ನಮ್ಮ ಕುಟುಂಬದ ಆಸ್ತಿಗಳಲ್ಲಿ ಅದಂತಹ ಪಾಲು ವಾಟ್ನಿ ಪತ್ರವು ನೊಂದಣಿಯಾಗಿರುತ್ತದೆ ಅಂದರೆ ಆ ಬಗ್ಗೆ ನನಗೆ ಗೊತ್ತಿರುವದಿಲ್ಲ. ಮಲ್ಲಿಕಾರ್ಜುನ ಈತನು ನನಗೆ ತಮ್ಮನಾಗಬೇಕು. 2005 ನೇ ಇಸ್ವಿಯಲ್ಲಿ ನನ್ನ ಸಹೋದರನಾದ ಮಲ್ಲಿಕಾರ್ಜುನ ಈತನ ಆರೋಗ್ಯ ಸರಿ ಇರಲಿಲ್ಲ ಅಂದರೆ ನನಗೆ ಗೊತ್ತಿರುವದಿಲ್ಲ. ಸದರಿ ಮಲ್ಲಿಕಾರ್ಜುನ ಈತನ ವೈದ್ಯಕೀಯ ಖರ್ಚಿಗಾಗಿ ರಿ.ಸನಂಬರಃ 310/1 ಬಿ/3 ಈ ಆಸ್ತಿಯನುನ ಮಾರಾಟಕ್ಕೆ ತೆಗೆಯಲಾಗಿತ್ತು ಅಂದರೆ ನನಗೆ ಗೊತ್ತಿರುವದಿಲ್ಲ. ಆ ರೀತಿ ಮಲ್ಲಿಕಾರ್ಜುನ ಈತನ ವೈದ್ಯಕೀಯ ಚಿಕಿತ್ಸೆಗಾಗಿ ಹಣಕಾಸಿನ ಅಡಚಣೆ ಇದ್ದುದರಿಂದ ರಿ.ಸನಂಬರಃ 310/1 ಬಿ/3 ಈ ಆಸ್ತಿಯಲ್ಲಿ ಒಟ್ಟು ಕ್ಷೇತ್ರ 03

ಎಕರೆ 39 ಗುಂಟೆಯಲ್ಲಿ 02 ಎಕರೆ 34 ಗುಂಟೆಯಷ್ಟು ಆಸ್ತಿಯನ್ನು ಪ್ರತಿವಾದಿ ನಂಬರಃ 4 ಮತ್ತು ಬಸವರಾಜ ಫಕ್ಕೀರಪ್ಪ ಕುಳೇನೂರ ಇವರಿಬ್ಬರೂ ಸೇರಿ ಖರೀದಿಗೆ ತೆಗೆದುಕೊಂಡಿದ್ದಾರೆ ಅಂದರೆ ನನಗೆ ಗೊತ್ತಿರುವದಿಲ್ಲ.

**18)** ಸದರಿ ಆಸ್ತಿಯನ್ನು ಮೇಲೆ ಹೇಳಿದ ಪ್ರತಿವಾದಿ ನಂಬರಃ 4 ಮತ್ತು ಬಸವರಾಜ ಫಕ್ಕೀರಪ್ಪ ಕುಳೇನೂರ ಇಬ್ಬರೂ ಸೇರಿ ಆ ಆಸ್ತಿಯನ್ನು ಖರೀದಿಗೆ ಹಿಡಿದುಕುಂಡು ಅದಕ್ಕೆ ಸಂಬಂದಪಟ್ಟ ಕಂದಾಯ ದಾಖಲಾತಿಗಳಲ್ಲಿ ತಮ್ಮ ಹೆಸರನ್ನು ಬದಲಾವಣೆ ಮಾಡಿಕೊಂಡು ಈಗ ಅವರೇ ಕಬ್ಜೆ ಹೊಂದಿ, ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ ಅಂದರೆ ನನಗೆ ಗೊತ್ತಿರುವದಿಲ್ಲ. ಪ್ರತಿವಾದಿ ನಂಬರಃ 4 ಫಕ್ಕೀರಪ್ಪ ಕುಳೇನೂರ ಇವರು ನಮ್ಮ ತಂದೆಯ ಸಹೋದರನಾಗಬೇಕು ಅಂದರೆ ಸರಿ. ನಮ್ಮ ಕುಟುಂಬದಲ್ಲಿ ಇರುವಂತಹ ಆಸ್ತಿಗಳ ಕುರಿತಾಗಿ ಆದಂತಹ ವ್ಯವಹರಣೆಯ ಕುರಿತಾಗಿ ನನಗೆ ಸಂಪೂರ್ಣ ಮಾಹಿತಿ ಗೊತ್ತಿರುತ್ತದೆ ಅಂದರೆ ಸರಿಯಲ್ಲ. ನಾನು ಚೆನ್ನಬಸಪ್ಪ ಈತನ ಸಹೋದರಿಯಾದಂತಹ ಪಾರಕ್ಕನ ಮಗ ಆನಂದ ಈತನ ಜೊತೆ ಮದುವೆಯಾಗಿದ್ದೇನೆ ಅಂದರೆ ಸರಿ. ನನ್ನ ಮದುವೆಯು 1989 ನೇ ಇಸ್ವಿಯಲ್ಲಿ ಆಗಿರುತ್ತದೆ. ಮದುವೆಯಾದ ನಂತರ ನನ್ನ ತಂದೆ ತಾಯಿಯ ಮನೆಗೆ ಆಗಾಗ ಹೋಗಿ ಬಂದು ಬರುತ್ತಿದ್ದೆ ಅಂದರೆ ಸರಿಯಲ್ಲ. ನಾನು 1989 ನೇ ಇಸ್ವಿಯಿಂದ ಕೇವಲ ಅಲ್ಪ ಅವಧಿಯಲ್ಲಿ ಬಂದು ಹೋಗಿದ್ದೇನೆ. ನಾನು ನಮ್ಮ ಒಟ್ಟು ಕುಟುಂಬದ ಮನೆಯಲ್ಲಿ ಏನಾದರೂ ಕಾರ್ಯಕ್ರಮಗಳು ಇದ್ದರೆ ಅವಾಗ ಮಾತ್ರ ಬರುವದು ಹೋಗುವದು ಮಾಡುತ್ತಿದ್ದೆ. ಈ ಪ್ರಕರಣದಲ್ಲಿಯ ದಾವಾ ಆಸ್ತಿ ಶೆಡ್ಯೂಲ್ ಎ ಅನುಕ್ರಮ ಸಂಖ್ಯೆಃ 5 ರಲ್ಲಿಯ ಆಸ್ತಿಯ ಪೈಕಿ 02 ಎಕರೆ 34 ಗುಂಟೆ ಆಸ್ತಿಯನ್ನು ಮಾರಾಟ ಮಾಡಿದ ವಿಷಯ ನನಗೆ ಗೊತ್ತಿದ್ದರೂ ಸಹ ನಾನು ಆ ಕುರಿತಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**19)** ನಾಗವ್ವ ಚೆನ್ನಬಸಪ್ಪ ಕುಳೇನೂರ ಇವರು ನನಗೆ ತಾಯಿಯಾಗಬೇಕು. ನಮ್ಮ ಕುಟುಂಬದ ಆಸ್ತಿಗಳಲ್ಲಿ 2005 ನೇ ಇಸ್ವಿಯಲ್ಲಿ ಪಾಲು ವಾಟ್ನಿಯಾಗಿದ್ದರ ಕುರಿತಾಗಿ ಮತ್ತು 4 ನೇ ಪ್ರತಿವಾದಿಗೆ ಮಲ್ಲಿಕಾರ್ಜುನ

ಈತನು ದಾವಾ ಶೆಡ್ಯೂಲಿ ಅನುಕ್ರಮ ಸಂಖ್ಯೆ: 5 ರ ಆಸ್ತಿಯನ್ನು ಖರೀದಿಗೆ ಕುಟ್ಟಂತಹ ವಿಷಯ ನನಗೆ ಸಂಪೂರ್ಣವಾಗಿ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮಲ್ಲಿಕಾರ್ಜುನ ಈತನ ವೈದ್ಯಕೀಯ ಖರ್ಚಿಗಾಗಿ 4 ನೇ ಪ್ರತಿವಾದಿಗೆ ಸರ್ವೆ ನಂಬರ: 310/1 ಬಿ/3 ಒಟ್ಟು 02 ಎಕರೆ 36 ಗುಂಟೆ ಆಸ್ತಿ ಖರೀದಿಗೆ ಕೊಟ್ಟಿರುತ್ತಾನೆ ಅಂದರೆ ನನಗೆ ಗೊತ್ತಿರುವದಿಲ್ಲ. ದಾವಾ ಆಸ್ತಿಗಳಲ್ಲಿ ನನಗೂ ಸಹ ಪಾಲು ಬೇಕು ಎಂದು ನನ್ನ ಸಹೊದರನಾದ ಮಲ್ಲಿಕಾರ್ಜುನ ಈತನ ಜೀವಿತ ಕಾಲದಲ್ಲಿ ನಾನು ಯಾವ ದಿನಾಂಕದಂದು ಪಾಲು ಕೊಡಿ ಎಂದು ಕೇಳಿರುತ್ತೇನೆ ಎಂದು ದಿನಾಂಕ ಮತ್ತು ಈಸ್ವಿ ನನಗೆ ನೆನಪಿಲ್ಲ. ನಮ್ಮ ಕುಟುಂಬದಲ್ಲಿ ಆಸ್ತಿಯ ವ್ಯವಹರಣೆಯ ಕುರಿತಾಗಿ ಮತ್ತು ನನ್ನ ಸಹೋದರ ಮಲ್ಲಿಕಾರ್ಜುನ ಈತನು ಜೀವಿತ ಕಾಲದಲ್ಲಿ ಸರ್ವೆ ನಂಬರ: 310/1 ಬಿ/3 ಒಟ್ಟು ಕ್ಷೇತ್ರದಲ್ಲಿ 02 ಎಕರೆ 36 ಗುಂಟೆ ಖರೀದಿಗೆ ಕೊಟ್ಟಿರುವ ವಿಷಯ ಗೊತ್ತಿದ್ದರೂ ಸಹ ಮುಚ್ಚಿಹಾಕಲು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈಗ ದಾವಾ ಅಸ್ತಿಗಳ ಮಾರುಕಟ್ಟೆ ಮೌಲ್ಯ ಹೆಚ್ಚಿಗೆ ಆಗಿದ್ದರಿಂದ ಪ್ರತಿವಾದಿ ನಂಬರ: 4 ಇವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ಮಲ್ಲಿಕಾರ್ಜುನ 4 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ ವಿಷಯ ಗೊತ್ತಿದ್ದರೂ ಸಹ ನಾನು ಆ ಕುರಿತಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಾ.</u>

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.